3. ಸಭೆಯ ಮುಂದಿಡಲಾದ ಕಾಗಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) ಅವರು : ಅಧ್ಯಕ್ಷರೆ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8(3)ನೇ ಪ್ರಕರಣದ ಮೇರೆಗೆ:

ಸರ್ಕಾರವು ವಶಕ್ಕೆ ತೆಗೆದುಕೊಂಡ 3 ಕಾಲೇಜಿನ ಸಿಬ್ಬಂದಿಯನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಡಿ:43:ಯುಇಸಿ :94(1), ದಿನಾಂಕ :19.06.1996ರನ್ನು ತಿದ್ದುಪಡಿ ಮಾಡಿ ದಿನಾಂಕ 13.03.2000ದಂದು ಹೊರಡಿಸಿದ ಡಿಪಿಎಆರ್: 15:ಎಸ್ಆರ್ಇ:99ನೇ ಅಧಿಸೂಚನೆ ಸಂಖ್ಯೆ. 1, 2 ಹಾಗೂ 3ನ್ನು ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಅವರು : ಅಧ್ಯಕ್ಷರೇ 1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ ಕಲಂ 20ರ ಮೇರೆಗೆ :-

ಬಳ್ಳಾರಿ ಜಿಲ್ಲೆ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ದೋಣಿಮಲೈ ರವರಿಗೆ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸುವ ಅನುಮತಿ ನೀಡುವ ಸಂಬಂಧವಾಗಿ ದಿನಾಂಕ :26.04.2000ದಂದು ಹೊರಡಿಸಿದ ಹೆಚ್‌ಡಿ:20:ಸಿಎನ್ಎ:2000ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತೇನೆ.

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ರಾಜ್ಯ ಸಚಿವರು) ಅವರು : ಅಧ್ಯಕ್ಷರೇ 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 42(3)ನೇ ಪ್ರಕರಣದ ಮೇರೆಗೆ :

ಬೆಂಗಳೂರು ವಿಶ್ವವಿದ್ಯಾಲಯದ 1997-98ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತ್ತು.

4. ಸರ್ಕಾರಿ ನಿರ್ಣಯ

ಕೆ.ಜಿ.ಎಫ್. ಚಿನ್ನದ ಗಣಿ ಮುಚ್ಚುವ ಬದಲು ಪುನಶ್ಚೇತನಗೊಳಿಸುವುದು.

ಅಧ್ಯಕ್ಷರು: ಈಗ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಕೆ.ಜಿ.ಎಫ್. ಚಿನ್ನದ ಗಣಿ ವಿಚಾರದಲ್ಲಿ ಒಂದು ವಿಶೇಷ ನಿರ್ಣಯವನ್ನು ಮಂಡಿಸುತ್ತೇನೆಂದು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ವಿಶೇಷ ನಿರ್ಣಯವನ್ನು ಮಂಡಿಸುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳು 147ರ ನಿಯಮದ ಅಡಿಯಲ್ಲಿ ಒಂದು ರಾಜ್ಯಕ್ಕೆ ಪ್ರಮುಖವಾದಂತಹ ಅಂಶವನ್ನು ನಿರ್ಣಯದ ಮೂಲಕ ಮಂಡಿಸುವುದಕ್ಕೆ ನಾನು ತಮ್ಮ ಅನುಮತಿಯನ್ನು ಕೋರುತ್ತೇನೆ. ತಾವು ನಿಯಮ 149ರ ಅಡಿಯಲ್ಲಿ ಈ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೊಟ್ಟರೆ ನಾನು ಮಂಡಿಸುತ್ತೇನೆ.